ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1331
ಮಾನ್ಯ ಸದಸ್ಯರ ಹೆಸರು : ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 15.03.2021
ಉತ್ತರಿಸುವ ಸಚಿವರು : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಬಿಪಿಎಲ್ ಮತ್ತು ಎಪಿಎಲ್ ಕಾರ್ಡುದಾರರಿಗೆ ಇರುವ ವೈದ್ಯಕೀಯ ವೆಚ್ಚ ಭರಿಸುವ ಯೋಜನೆಗಳು ಯಾವುವು; (ಯೋಜನೆವಾರು ಮಾಹಿತಿ ನೀಡುವುದು)	ರಾಜ್ಯದಲ್ಲಿ ಬಿಪಿಎಲ್ ಮತ್ತು ಎಪಿಎಲ್ ಕಾರ್ಡ್‌ಗಳನ್ನು ಹೊಂದಿರುವವರಿಗೆ **ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ** ಯೋಜನೆ ಜಾರಿಯಲ್ಲಿರುತ್ತದೆ. ಯೋಜನೆಯ ಮಾಹಿತಿಯನ್ನು **ಅನುಬಂಧದಲ್ಲಿ** ಲಗತ್ತಿಸಿದೆ. ರಾಜ್ಯ ಸರ್ಕಾರವು ಬಿಪಿಎಲ್ ರೋಗಿಗಳಿಗೆ **'ಅಂಗಾಂಗ ಕಸಿ ಯೋಜನೆ'**ಯನ್ನು ಸರ್ಕಾರಿ ಆದೇಶ ಸಂಖ್ಯೆ: ಆಕುಕ/64/ಎಫ್‌ಪಿಇ/2018 ಅನ್ವಯ ದಿನಾಂಕ: 3.12.2018 ರಿಂದ ಜಾರಿಗೊಳಿಸಿದೆ. ಸದರಿ ಯೋಜನೆಯಡಿ ಹೃದಯ, ಕಿಡ್ನಿ, ಯಕೃತ್ತು ಇತ್ಯಾದಿ ಅಂಗಾಂಗಳನ್ನು ಕಸಿ ಮಾಡಲಾಗುತ್ತದೆ.
ಆ	ಆಯುಷ್ಮಾನ್ ಕಾರ್ಡ್‌ನಲ್ಲಿ ಯಾವ ಯಾವ ಖಾಯಿಲೆಗಳಿಗೆ ಚಿಕಿತ್ಸಾ ವೆಚ್ಚವನ್ನು ಭರಿಸಲಾಗುತ್ತಿದೆ; ರೋಗಿಯು ತುರ್ತು ಸಂದರ್ಭದಲ್ಲಿ ನೇರವಾಗಿ ಖಾಸಗಿ ಆಸ್ಪತ್ರೆಗೆ ಒಳರೋಗಿಯಾಗಿ ದಾಖಲಾಗಿರುವಾಗ ಅವರ ಚಿಕಿತ್ಸಾ ವೆಚ್ಚವನ್ನು ಭರಿಸಲು ಯಾವ ಕ್ರಮ ವಹಿಸಲಾಗುತ್ತಿದೆ. ಅಂತಹ ಸಂದರ್ಭದಲ್ಲಿ ರೆಫರೆಲ್ ಪತ್ರದಿಂದ ವಿನಾಯತಿ ನೀಡಲಾಗಿದೆಯೇ;	ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಯೋಜನೆಯಡಿ ಪ್ರಾಥಮಿಕ ಆರೋಗ್ಯ ಆರೈಕೆ, ಸರಳ ದ್ವಿತೀಯ ಆರೋಗ್ಯ ಆರೈಕೆ–291 ಚಿಕಿತ್ಸಾ ವಿಧಾನಗಳು, ಕ್ಲಿಷ್ಟಕರ ದ್ವಿತೀಯ ಆರೋಗ್ಯ ಆರೈಕೆ – 254 ಚಿಕಿತ್ಸಾ ವಿಧಾನಗಳು, ತೃತೀಯ ಆರೋಗ್ಯ ಆರೈಕೆ – 900 ಚಿಕಿತ್ಸಾ ವಿಧಾನಗಳು, ತುರ್ತು ಆರೋಗ್ಯ ಆರೈಕೆಗಳಿಗೆ 169 ಮತ್ತು 36 ಉಪ ಚಿಕಿತ್ಸಾ ವಿಧಾನಗಳು ಒಟ್ಟು 1650 ಚಿಕಿತ್ಸಾ ವಿಧಾನಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ತುರ್ತು ಸಂದರ್ಭದಲ್ಲಿ ಕೈಗೊಳ್ಳಬೇಕಾಗಿರುವ ಚಿಕಿತ್ಸೆಗಳನ್ನು ಆದೇಶದ ಅನುಬಂಧ–4 ರಡಿಯಲ್ಲಿ ಗುರುತಿಸಿದ್ದು. ಈ ಗುರುತಿಸಿದ ಚಿಕಿತ್ಸಾ ವಿಧಾನಗಳಿಗಾಗಿ ರೋಗಿಯು ಯಾವುದೇ ರೆಫರಲ್ ಇಲ್ಲದೆ ನೇರವಾಗಿ ನೋಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬಹುದಾಗಿದೆ ಹಾಗೂ ಈ ಪ್ರಕ್ರಿಯೆಗೆ ರೆಫರೆಲ್ ಪತ್ರ ವಿನಾಯಿತಿ ನೀಡಲಾಗಿದೆ.

ಇ	ಆಯುಷ್ಮಾನ್ ಕಾರ್ಡ್‌ನಲ್ಲಿ ಖಾಸಗಿ ಆಸ್ಪತ್ರೆಯಲ್ಲಿ ಹೆರಿಗೆಯಾದ ನಂತರ ನವಜಾತ ಶಿಶುವಿನ ಚಿಕಿತ್ಸೆಗೆ ಅವಕಾಶವಿಲ್ಲದಿರುವುದು ನಿಜವೇ ಇದರಿಂದ ರೋಗಿಗಳಿಗೆ ಅರ್ಹತೆಯನ್ನು ಹೊಂದಿದ್ದರೂ ಆರ್ಥಿಕ ಹೊರೆಯನ್ನು ಅನುಭವಿಸುತ್ತಿರುವುದನ್ನು ತಪ್ಪಿಸಲು ಸರ್ಕಾರದ ಕ್ರಮವೇನು?	ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆಯಡಿ ನವಜಾತ ಶಿಶುವಿನ ಚಿಕಿತ್ಸೆಗೆ 10 ಚಿಕಿತ್ಸಾ ವಿಧಾನಗಳು ಲಭ್ಯವಿದ್ದು ಈ ಚಿಕಿತ್ಸೆಗಳನ್ನು ಕೈಗೊಳ್ಳಬಹುದಾಗಿದೆ.

ಆಕುಕ 41 ಎಸ್‌ಬಿವಿ 2021

(ಡಾ॥ ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಚುಕ್ಕೆ ಗುರುತಿಲ್ಲದ ಪ್ರಸಂ:1331 ಕ್ಕೆ ಅನುಬಂಧ

ಆಯುಷ್ಮಾನ್ ಭಾರತ್-ಅರೋಗ್ಯ ಕರ್ನಾಟಕ

ರಾಜ್ಯ ಸರ್ಕಾರವು ಆಯುಷ್ಮಾನ್ ಭಾರತ್-ಅರೋಗ್ಯ ಕರ್ನಾಟಕ ಎಂಬ ಸಂಯೋಜಿತ ಯೋಜನೆಯನ್ನು ಭರವಸೆ ಮಾದರಿಯಲ್ಲಿ ದಿ:30.10.2018ರಿಂದ ಅನುಷ್ಠಾನಗೊಳಿಸಲಾಗುತ್ತಿದೆ.

ಯೋಜನೆಯ ರೂಪುರೇಷೆಗಳು:

1. ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆಯ ಅಡಿಯಲ್ಲಿ ಒಟ್ಟು 1650 ನಿರ್ದಿಷ್ಟ ಚಿಕಿತ್ಸಾ ವಿಧಾನಗಳಿಗೆ ಚಿಕಿತ್ಸೆ ನೀಡಲಾಗುತ್ತದೆ.

2. ಪಡಿತರ ಕಾರ್ಡ್ ಮತ್ತು ಆಧಾರ್ ಕಾರ್ಡ್‌ಗಳು ಯೋಜನೆಯ ಅರ್ಹತಾ ಮಾನದಂಡಗಳಾಗಿವೆ.

3. ಯೋಜನೆಯ ಫಲಾನುಭವಿಗಳನ್ನು ಅರ್ಹತಾ ರೋಗಿ ಮತ್ತು ಸಾಮಾನ್ಯ ರೋಗಿ ಎಂದು ಎರಡು ವರ್ಗಗಳಾಗಿ ವಿಂಗಡಿಸಲಾಗಿದೆ.

ಅ) ಅರ್ಹತಾ ರೋಗಿ: ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆ, 2013ರಡಿ (ಬಿಪಿಎಲ್) "ಅರ್ಹ ಕುಟುಂಬ"ಕ್ಕೆ ಸೇರಿರುವರು ಹಾಗೂ ಈ ಹಿಂದೆ ಚಾಲ್ತಿಯಲ್ಲಿದ್ದ ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆಯಡಿಯಲ್ಲಿ ನೋಂದಾಯಿತಗೊಂಡಿರುವ ಕುಟುಂಬಗಳಿಗೆ ಒಂದು ವರ್ಷಕ್ಕೆ ಒಂದು ಕುಟುಂಬಕ್ಕೆ ರೂ.5.00 ಲಕ್ಷಗಳವರೆಗೆ ಉಚಿತ ಚಿಕಿತ್ಸೆ ಒದಗಿಸಲಾಗುವುದು.

ಆ) ಸಾಮಾನ್ಯ ರೋಗಿ: ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆ, 2013ರಡಿ "ಅರ್ಹ ಕುಟುಂಬಕ್ಕೆ" ಸೇರಿಲ್ಲದೇ ಇರುವವರು. ಇವರಿಗೆ ಸರ್ಕಾರಿ ಪ್ಯಾಕೇಜ್ ದರದ 30% ರಷ್ಟು ಇದ್ದು, ಸಹ-ಪಾವತಿಯ ಆಧಾರದ ಮೇಲೆ ಒಂದು ವರ್ಷಕ್ಕೆ ಒಂದು ಕುಟುಂಬಕ್ಕೆ ರೂ.1.50 ಲಕ್ಷ ಇರುತ್ತದೆ.

4. ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆಯ ಅಡಿಯಲ್ಲಿ "ಎಬಿ-ಎಆರ್‌ಕೆ" ಕಾರ್ಡ್‌ನ್ನು ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ರೂ.10/- ಶುಲ್ಕದೊಂದಿಗೆ ನೀಡಲಾಗುತ್ತದೆ.

5. ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್, ಸೇವಾ ಸಿಂಧು ಹಾಗೂ ಬಾಪೂಜಿ ಕೇಂದ್ರಗಳಲ್ಲಿ ರೂ.10/- ಶುಲ್ಕದೊಂದಿಗೆ ಎ4 ಅಳತೆಯ ಕಾಗದದಲ್ಲಿ ಹಾಗೂ ರೂ. 35/- ಶುಲ್ಕದೊಂದಿಗೆ ಪ್ಲಾಸ್ಟಿಕ್ ಕಾರ್ಡ್‌ನಲ್ಲಿ "ಎಬಿ-ಎಆರ್‌ಕೆ" ಕಾರ್ಡ್ ಪಡೆದುಕೊಳ್ಳಬಹುದು.

6. ರೋಗಿಗಳು ತಮ್ಮ ಪಡಿತರ ಚೀಟಿ ಮತ್ತು ಆಧಾರ್ ಕಾರ್ಡ್‌ನೊಂದಿಗೆ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಹೋಗಿ ತಪಾಸಣೆ ಮಾಡಿಸಿಕೊಳ್ಳಬೇಕು. ಅದೇ ಸರ್ಕಾರಿ ಆಸ್ಪತ್ರೆಯು ಚಿಕಿತ್ಸೆ ನೀಡುವ ಸಾಮರ್ಥ್ಯಯ ಹೊಂದಿದ್ದಲ್ಲಿ ಅಲ್ಲಿಯೇ ರೋಗಿಗೆ ಚಿಕಿತ್ಸೆ ನೀಡಲಾಗುವುದು.

7. ಸದರಿ ಸರ್ಕಾರಿ ಆಸ್ಪತ್ರೆಯು ಚಿಕಿತ್ಸೆ ನೀಡುವ ಸಾಮರ್ಥ್ಯವನ್ನು ಹೊಂದಿಲ್ಲದಿದ್ದರೆ ರೆಫರಲ್ ನೀಡಲಾಗುತ್ತದೆ. ರೆಫರಲ್ ಪಡೆದುಕೊಂಡ ರೋಗಿಯು ತಾನು ಇಚ್ಛಿಸುವ ಯಾವುದೇ ನೋಂದಾಯಿತ ಖಾಸಗಿ ಅಥವಾ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಬಹುದು.

8. ತುರ್ತು ಚಿಕಿತ್ಸೆಗಳಿಗೆ ಯಾವುದೇ ರೆಫರಲ್ ಇಲ್ಲದೆ ನೇರವಾಗಿ ನೋಂದಾಯಿತ ಖಾಸಗಿ ಅಥವಾ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯಬಹುದು.

ಅಂಗಾಂಗ ಕಸಿ ಯೋಜನೆ:

G.O.No.HFW 64 FPE 2018, ದಿ:03.12.2018 ಆದೇಶದನ್ವಯ ಕರ್ನಾಟಕದ ರಾಜ್ಯ ಬಡ/ಬಿಪಿಎಲ್ ರೋಗಿಗಳಿಗೆ ಕಿಡ್ನಿ, ಲಿವರ್ ಹಾಗೂ ಹೃದಯ ಅಂಗಾಂಗ ಕಸಿ ಯೋಜನೆಯನ್ನು ಜಾರಿಗೆ ತಂದಿದೆ.

ಯೋಜನೆಯ ರೂಪುರೇಷೆಗಳು:

1. ಈ ಯೋಜನೆಯು ಕರ್ನಾಟಕ ರಾಜ್ಯದ ಬಡವು/ಬಿಪಿಎಲ್ ರೋಗಿಗಳನ್ನು ಬಿಪಿಎಲ್ ಕಾರ್ಡ್ ಮತ್ತು ಆಧಾರ್ ಕಾರ್ಡ್‌ಗಳ ಆಧಾರದಲ್ಲಿ ಗುರುತಿಸಲಾಗುವುದು.

2. ಫಲಾನುಭವಿಯು ಸಾರ್ವಜನಿಕ ಆರೋಗ್ಯ ಸಂಸ್ಥೆಗಳಿಗೆ (ಇನ್ಸ್‌ಟಿಟ್ಯೂಟ್ ಆಫ್ ನೆಫ್ರೋ ಯುರಾಲಜಿ, ಶ್ರೀ ಜಯದೇವ ಇನ್ಸ್‌ಟಿಟ್ಯೂಟ್ ಆಫ್ ಕಾರ್ಡಿಯೋಲಜಿ, ಪಿ.ಎಂ.ಎಸ್.ಎಸ್.ವೈ, ಇನ್ಸ್‌ಟಿಟ್ಯೂಟ್ ಆಫ್ ಗ್ಯಾಸ್ಟ್ರೋ ಎಂಟೆರಾಲಜಿ) ಭೇಟಿ ನೀಡಬೇಕು ಮತ್ತು ಮೌಲ್ಯಮಾಪನದ ನಂತರ ಅಂಗಾಂಗ ಕಸಿಗೆ ಸಂಬಂಧಿಸಿದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ನೋಂದಣಿ ಮಾಡಲು ಆಸ್ಪತ್ರೆಯ ಅಧಿಕೃತ ಸಮಿತಿಯಿಂದ (ಆಸ್ಪತ್ರೆ ಮಟ್ಟದ /ಜಿಲ್ಲಾ/ರಾಜ್ಯಮಟ್ಟದ) ಅನುಮೋದನೆ ಪಡೆಯಬೇಕು.

3. ಮೃತದೇಹ/ಮೆದುಳು ನಿಷ್ಕ್ರಿಯಗೊಂಡವರಿಂದ ಹಾಗೂ ಜೀವಂತ ದಾನಿಗಳಿಂದ ಅಥವಾ ಹತ್ತಿರದ ಸಂಬಂಧಿಯಿಂದ ಅಂಗಾಂಗ ದಾನ ಪಡೆದುಕೊಂಡಾಗ ಅಂತಹ ಅಂಗಾಂಗ ಕಸಿ ಶಸ್ತ್ರ ಚಿಕಿತ್ಸೆಯನ್ನು ನೋಂದಾಯಿತ ಸರ್ಕಾರಿ ಆಸ್ಪತ್ರೆಗಳಲ್ಲಿ ಮಾಡಲಾಗುವುದು.

4. ಒಂದೊಮ್ಮೆ ಮೇಲೆ ತಿಳಿಸಲಾದ ಸರ್ಕಾರಿ ಆಸ್ಪತ್ರೆಗಳಿಗೆ ಅಂಗಾಂಗ ಕಸಿ ಶಸ್ತ್ರ ಚಿಕಿತ್ಸೆ ಮಾಡುವ ಸಾಮರ್ಥ್ಯ ಇಲ್ಲದಿದ್ದಲ್ಲಿ ನೋಂದಾಯಿತ ಖಾಸಗಿ ಆಸ್ಪತ್ರೆಗಳಿಗೆ ರೆಫರಲ್ ಮಾಡಬಹುದು.

5. ಮೃತ ಶರೀರ (ಮೆದುಳು ನಿಷ್ಕ್ರಿಯಗೊಂಡ) ಕಸಿ ಪ್ರಕರಣದಲ್ಲಿ ಅಂಗಾಂಗ ಪುನರ್ ಕೇಂದ್ರದಲ್ಲಿ ಸ್ವೀಕರಿಸುವವರ ಮತ್ತು ಲಭ್ಯತೆಯ ನೋಂದಣಿ ಪ್ರಕಾರ ಸರ್ಕಾರಿ ಅಥವಾ ಖಾಸಗಿ ನೋಂದಾಯಿತ ಆಸ್ಪತ್ರೆಗಳಲ್ಲಿ ಅಂಗಾಂಗ ಕಸಿ ಶಸ್ತ್ರ ಚಿಕಿತ್ಸೆಯನ್ನು ನಡೆಸಬಹುದು.

6. ಚಿಕಿತ್ಸಾ ವಿಧಾನಗಳ ಪೂರ್ವಾನುಮತಿ ಪ್ರಕ್ರಿಯೆ ಮತ್ತು ಸ್ವೀಕರಿಸುವ ಬಿಪಿಎಲ್/ಬಡುವರು ಮುಂತಾದ ಅನ್ವಯಿಸುವ ಸ್ಥಿತಿಗತಿಗಳ ಕುರಿತಂತೆ ಜೀವ ಸಾರ್ಥಕತೆ ಸೊಸೈಟಿಯ ಹಂಚಿಕೆ ನೀತಿಯನ್ನು ಅನುಸರಿಸಲಾಗುವುದು.

7. ರೋಗಿಗಳು ನಿರ್ದಿಷ್ಟ ಅಂಗಕ್ಕಾಗಿ ಆನ್‌ಲೈನ್ ಮೂಲಕ ಜೀವಸಾರ್ಥಕತೆಯಲ್ಲಿ (http:// www.jeevasarthaka.karnataka.gov.in) ಮೃತದೇಹ / ಮೆದುಳು ನಿಷ್ಕ್ರಿಯಗೊಂಡವರ ಅಂಗಾಂಗ ಕಸಿ ಕಾರ್ಯಕ್ರಮದ ಅಡಿಯಲ್ಲಿ ನೋಂದಣಿ ಮಾಡಬಹುದು.